ನಾಲ್ಕೈದು ದಶಕಗಳ ಹಿಂದಿನ ಮಾತು. ಆಟಗಾರ ಬಿಳಿಬಣ್ಣದ ದೊಗಳೆ ಪೋಷಾಕು ಧರಿಸಿ ಕಲಾತ್ಮಕವಾಗಿ ಟೆಸ್ಟ್ ಕ್ರಿಕೆಟ್‌ನಲ್ಲಿ ಬ್ಯಾಟ್ ಬೀಸುತ್ತಿದ್ದ, ಬೌಲಿಂಗ್ ಮಾಡುತ್ತಿದ್ದ ಕ್ಷಣಗಳನ್ನು ಕಪ್ಪು–ಬಿಳಿ ಬಣ್ಣದ ಟಿ.ವಿ. ಮುಂದೆ ಕುಳಿತ ಕ್ರಿಕೆಟ್ ಪ್ರೇಮಿಗಳು ಪರವಶರಾಗಿ ಕಣ್ತುಂಬಿಕೊಳ್ಳುತ್ತಿದ್ದ ದಿನಗಳವು. ಕ್ರಿಕೆಟ್ ಎಂದರೆ ಟೆಸ್ಟ್ ಮಾತ್ರ, ಸಭ್ಯರ ಆಟದ ನೈಜತೆ ಇರುವುದೇ ಈ ಮಾದರಿಯಲ್ಲಿ ಎನ್ನುವ ನಂಬಿಕೆ ಗಟ್ಟಿಯಾಗಿದ್ದ ಕಾಲವದು.

ಜಗತ್ತಿನ ಮೊಟ್ಟಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯ 1877ರಲ್ಲಿ – ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ನಡೆದಿತ್ತು. ಭಾರತ ತನ್ನ ಚೊಚ್ಚಲ ಟೆಸ್ಟ್ ಆಡಿದ್ದು 1932ರಲ್ಲಿ. ಈ ಪಂದ್ಯ ನಡೆದು ಒಂಬತ್ತು ದಶಕಗಳು ಉರುಳಿವೆ. ಟೆಸ್ಟ್ ಕ್ರಿಕೆಟ್ ಬಳಿಕ ಏಕದಿನದತ್ತ ಹೊರಳಿದ ಕಾಲ ಈಗ ಟ್ವೆಂಟಿ–20ಯ ತೀವ್ರತೆಯತ್ತ ಬಂದು ನಿಂತಿದೆ.

ಈಗಿನದ್ದು ಓಡುವ ಕಾಲ. ಜನರ ಅಭಿರುಚಿ, ಅಭಿಲಾಷೆಗೆ ತಕ್ಕಂತೆ ಕ್ರಿಕೆಟ್ ಚೆಂಡು ಓಡುತ್ತಲೇ ಇದೆ. ಮೊದಲಿನ ಹಾಗೆ ದಿನಗಟ್ಟಲೆ ಪ್ರತಿ ಎಸೆತವನ್ನೂ ಆಸ್ವಾದಿಸುವಷ್ಟು ಪುರಸೊತ್ತು ಜನರಲ್ಲಿ ಈಗಿಲ್ಲ. ಈಗಿನ ಕ್ರಿಕೆಟ್ ಪ್ರೇಮಿಗಳು ಕೂಡ ಓಡುವ ಚೆಂಡಿನಷ್ಟೇ ವೇಗದಲ್ಲಿ ಪಂದ್ಯ ಮುಗಿದು ಹೋಗಬೇಕು ಎಂದು ಬಯಸುತ್ತಿದ್ದಾರೆ. ಬದಲಾದ ಕಾಲಮಾನ, ನಿರೀಕ್ಷೆ ಮತ್ತು ಆಶಯಕ್ಕೆ ತಕ್ಕಂತೆ 17 ವರ್ಷಗಳ ಹಿಂದೆ ಆರಂಭವಾದ ಮಿಲಿಯನ್ ಡಾಲರ್ ಬೇಬಿ ‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಟೂರ್ನಿಗೆ ಈಗ 18ರ ಹರೆಯ. ಹದಿನೆಂಟು ಎನ್ನುವುದು ಮನುಷ್ಯನಿಗೆ ಪ್ರವರ್ಧಮಾನಕ್ಕೆ, ಪ್ರಬುದ್ಧತೆಗೆ ಹಾಗೂ ತನ್ನ ಬದುಕು ತಾನು ಕಟ್ಟಿಕೊಳ್ಳಲು ಅಣಿಯಾಗುವ ಸಮಯ. ಆದರೆ ಐಪಿಎಲ್ ಜನ್ಮತಳೆದ ಮೊದಲ ವರ್ಷದಿಂದಲೇ ತನ್ನ ಬದುಕು ಗಟ್ಟಿಯಾಗಿ ಕಟ್ಟಿಕೊಂಡು ಸಾಕಷ್ಟು ಜನರ, ಆಟಗಾರರ ಬದುಕು ಕೂಡ ರೂಪಿಸಿದೆ. ಹುಟ್ಟಿದ ವರ್ಷವೇ ಓಡಲು ಆರಂಭಿಸಿದೆ!

ಟೆಸ್ಟ್ ಕ್ರಿಕೆಟ್ ದಿನಗಟ್ಟಲೆ ನೋಡುವ ಮನಸ್ಥಿತಿ ಬದಲಾದ ಬಳಿಕದ ಕಾಲದಲ್ಲಿ ಬಂದ ಐಪಿಎಲ್ ಹೊಸ ಕ್ರಿಕೆಟ್ ಪ್ರೇಮಿಗಳನ್ನು ಹುಟ್ಟುಹಾಕಿದೆ. ಈ ಆಟಕ್ಕೊಂದು ಹೊಸ ಆಯಾಮ ದೊರಕಿಸಿಕೊಟ್ಟಿದೆ. ಆಟಗಾರರು, ಫ್ರಾಂಚೈಸ್‌ಗಳು, ಉದ್ಯಮಿಗಳು, ಟೀ ಶರ್ಟ್, ಟೋಪಿ ಮಾರುವ ವ್ಯಾಪಾರಿಗಳು, ಜಾಹೀರಾತು ಜಗತ್ತು, ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐಯನ್ನು ಮತ್ತಷ್ಟು ಸಿರಿವಂತ ಮಂಡಳಿಯನ್ನಾಗಿ ಮಾಡಿದ ಕೀರ್ತಿ ಐಪಿಎಲ್ ಹೊಂದಿದೆ. ಈ ಮಾದರಿಯ ಕ್ರಿಕೆಟ್‌ನಿಂದಾಗಿ ಅಭಿಮಾನಿಗಳ ಸ್ಥಿತಿ, ಸಂಭ್ರಮಿಸುವ ಮನಸ್ಥಿತಿಯೂ ಬದಲಾಗಿದೆ.

ಫ್ರಾಂಚೈಸ್ ಆಧಾರಿತವಾದ ಐಪಿಎಲ್‌ನಲ್ಲಿ ಕರ್ನಾಟಕದ ಆಟಗಾರರು ಬೇರೆ ಬೇರೆ ತಂಡಗಳಲ್ಲಿ ಆಡುತ್ತಿದ್ದಾರೆ. ವಿದೇಶಿ ತಾರೆಯರು, ಭಾರತದ ಸ್ಟಾರ್ ಆಟಗಾರರು, ದೇಶಿ ಕ್ರಿಕೆಟ್‌ನಲ್ಲಿ ಮಿಂಚುತ್ತಿರುವ ಯುವ ಪ್ರತಿಭೆಗಳು – ಹೀಗೆ ಎಲ್ಲರಿಗೂ ಚುಟುಕು ಕ್ರಿಕೆಟ್‌ನಲ್ಲಿ ವೇದಿಕೆ ಸಿಗುತ್ತಿದೆ. ರಾಜ್ಯ, ರಾಷ್ಟ್ರ ಬೇರೆಯಾದರೂ ಐಪಿಎಲ್‌ನಲ್ಲಿ ಒಂದೇ ತಂಡದಲ್ಲಿ ಒಟ್ಟಿಗೆ ಆಡುವ ಅವಕಾಶ ಲಭಿಸಿದೆ. ಇಲ್ಲಿ ತಂಡದ ಮೇಲಿನ ಪ್ರೀತಿಗಿಂತ ಮೂರು ಗಂಟೆ ಪಂದ್ಯದ ಮನರಂಜನೆ, ಉಲ್ಲಾಸ, ಸಂಭ್ರಮವೇ ಪ್ರಧಾನವಾಗಿದೆ. ತಮ್ಮ ನೆಚ್ಚಿನ ತಂಡದ ಬ್ಯಾಟ್ಸ್‌ಮನ್ ಬೌಂಡರಿ ಹೊಡೆದಾಗ ಮಾತ್ರ ಸಂಭ್ರಮಿಸುತ್ತಿದ್ದ ಕ್ರಿಕೆಟ್ ಅಭಿಮಾನಿ ಈಗ ಬೇರೆ ತಂಡದಲ್ಲಿರುವ ನೆಚ್ಚಿನ ಬೌಲರ್ ವಿಕೆಟ್ ಉರುಳಿಸಿದಾಗಲೂ ಚಪ್ಪಾಳೆ ಹೊಡೆದು ಖುಷಿಪಡುವ ಸ್ಥಿತಿಗೆ ತಲುಪಿದ್ದಾನೆ. ಹೀಗಾಗಿ ಐಪಿಎಲ್ ಜನರ ಪಾಲಿಗೆ ವೃತ್ತಿಪರ ಕ್ರಿಕೆಟ್ ಪ್ರೀತಿ ಎನ್ನುವುದಕ್ಕಿಂತ ಹೆಚ್ಚಾಗಿ ಮನರಂಜನೆಯೇ ಪ್ರಮುಖ.



## ಟೆಸ್ಟ್ ಫಲಿತಾಂಶ ಬದಲಿಸಿದ ಐಪಿಎಲ್!

ಐಪಿಎಲ್ ಬಂದ ಬಳಿಕ ಟೆಸ್ಟ್ ಮಾದರಿಯ ಕ್ರಿಕೆಟ್ ನೋಡುಗರ ಸಂಖ್ಯೆ ಕಡಿಮೆಯಾಗಿದೆ. ಅದರ ಬೇಡಿಕೆಯೂ ಇಳಿದಿದೆ. ಈ ಮಾದರಿಯ ಸೊಬಗನ್ನು ಚುಟುಕು ಕ್ರಿಕೆಟ್ ಕಸಿದುಕೊಂಡಿದೆ ಎನ್ನುವ ಬಹು ಆಯಾಮಗಳ ಚರ್ಚೆಯ ನಡುವೆಯೂ ಐಪಿಎಲ್‌ನಿಂದಾಗಿ ಟೆಸ್ಟ್ ಸ್ವರೂಪವೇ ಬದಲಾಗಿದೆ ಎನ್ನುವ ವಿಭಿನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಮಾಜಿ ಕ್ರಿಕೆಟಿಗ ಆನಂದ ಯಲವಗಿ.

ಮೂಲತಃ ಮಹಾರಾಷ್ಟ್ರದ ಪುಣೆಯ ಆನಂದ 29 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದಾರೆ. ವಿಶೇಷವೆಂದರೆ 50 ವರ್ಷದ ಆನಂದ ಮಹಾರಾಷ್ಟ್ರ ಮತ್ತು ಕರ್ನಾಟಕ ಎರಡೂ ತಂಡಗಳ ಪರ ರಣಜಿ ಟೂರ್ನಿಯಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಭಾರತ ಜೂನಿಯರ್ ತಂಡವನ್ನು ಪ್ರತಿನಿಧಿಸಿದ್ದಾರೆ. ಮುಖ್ಯವಾಗಿ ಟೆಸ್ಟ್, ಏಕದಿನ ಮತ್ತು ಐಪಿಎಲ್‌ನ ಸಾಧಕ ಬಾಧಕಗಳನ್ನು ಹತ್ತಿರದಿಂದ ಕಂಡಿದ್ದಾರೆ. ಇತ್ತೀಚೆಗಷ್ಟೇ ಅವರು ಬಿಹಾರ ಕ್ರಿಕೆಟ್ ಸಂಸ್ಥೆಯ ಕ್ರಿಕೆಟ್ ಅಭಿವೃದ್ಧಿ ಮತ್ತು ಆಪರೇಷನ್ ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಅವರು ಹೇಳುವುದಿಷ್ಟು: ಐಪಿಎಲ್ ಮತ್ತು ಟೆಸ್ಟ್ ಮಾದರಿಗೆ ಸಾಕಷ್ಟು ವ್ಯತ್ಯಾಸವಿದ್ದರೂ ಕ್ರಿಕೆಟ್ ಬೆಳವಣಿಗೆಗೆ ಪರಸ್ಪರ ಪೂರಕವಾಗಿವೆ. ಮೂರ್ನಾಲ್ಕು ದಶಕಗಳ ಹಿಂದೆ ನಡೆಯುತ್ತಿದ್ದ ಟೆಸ್ಟ್‌ಗಳಲ್ಲಿ ಬಹಳಷ್ಟು ಫಲಿತಾಂಶಗಳು ಡ್ರಾ ಹಾದಿಯಲ್ಲಿಯೇ ಇರುತ್ತಿದ್ದವು. ಅದಕ್ಕೆ ತಕ್ಕಂತೆ ಬ್ಯಾಟ್ಸ್‌ಮನ್‌ಗಳು ಕೂಡ ನಿಧಾನಗತಿಯಲ್ಲಿ ಬ್ಯಾಟಿಂಗ್ ಮಾಡುತ್ತಿದ್ದರು. ನೂರಾರು ಎಸೆತಗಳನ್ನು ಎದುರಿಸಿಯೂ ಬೆರಳೆಣಿಕೆಯಷ್ಟೇ ರನ್‌ಗಳನ್ನು ಹೊಡೆದ ಆಟಗಾರರ ಉದಾಹರಣೆಗಳು ಇವೆ. ಆದರೆ ಐಪಿಎಲ್ ಬಂದ ಬಳಿಕ ಟೆಸ್ಟ್ ಸ್ವರೂಪವೂ ಬದಲಾಗಿ ಗೆಲುವಿನ ಫಲಿತಾಂಶ ಹೊರಹೊಮ್ಮುತ್ತಿವೆ.

ಐಪಿಎಲ್‌ನಿಂದ ಆಟಗಾರರಿಗೆ ಅವಕಾಶಗಳು ಎಷ್ಟಿವೆಯೊ; ಸ್ಪರ್ಧೆಯೂ ಅಷ್ಟೇ ಹೆಚ್ಚಾಗಿದೆ. 1990 ಮತ್ತು ನಂತರದ ದಿನಗಳಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆಯಲು ದೇಶೀಯ ಟೂರ್ನಿಗಳಲ್ಲಿ ಸಾಕಷ್ಟು ಬೆವರು ಸುರಿಸಬೇಕಾಗುತ್ತಿತ್ತು. ಅವಕಾಶಕ್ಕಾಗಿ ಕಾಯಬೇಕಿತ್ತು. ಆದರೆ ಈಗ ಕೆಲವೇ ಐಪಿಎಲ್ ಪಂದ್ಯಗಳಲ್ಲಿ ಆಡುವ ಆಟಗಾರನಿಗೂ ದೇಶವನ್ನು ಪ್ರತಿನಿಧಿಸುವ ಅವಕಾಶ ಸಿಗುತ್ತಿದೆ. ಚುಟುಕು ಕ್ರಿಕೆಟ್‌ನಿಂದಾಗಿ ಟೆಸ್ಟ್ ಮಾದರಿಗೆ ಅನುಕೂಲವಾಗಿದೆ. ಕಾಲ ಬದಲಾದಂತೆ ಕ್ರೀಡೆಯ ಸ್ವರೂಪ, ಮಾದರಿ ಮತ್ತು ಹೊಸತನಗಳು ಬಂದೇ ಬರುತ್ತವೆ. ಯುವ ತಲೆಮಾರಿನ ಆಟಗಾರರು ಹೊಸತನದ ಜೊತೆಗೆ ಸಾಗುತ್ತಿರುವುದು ಮತ್ತು ಕ್ರಿಕೆಟ್ ಪ್ರೇಮಿಗಳಿಗೆ ಹೊಸತನ ನೀಡುತ್ತಿರುವುದು ಆಟದ ಬೆಳವಣಿಗೆಗೆ ಪೂರಕವಾಗಿದೆ.